## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 620/2014

**ಸಾಕ್ಷಿಯನ್ನು ದಿಃ 27.06.2023 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ಶ್ರೀನಿವಾಸ ಭಟ್ ಕೆ. | ಸಿ.ಡಬ್ಲ್ಯೂ: **26** | ಪಿ.ಡಬ್ಲ್ಯೂ: **17** |
| ತಂದೆಯ ಹೆಸರು | ಎಸ್ ಕೃಷ್ಣ ಭಟ್ | | |
| ವಯಸ್ಸು | **70** ವರ್ಷ | | |
| ಕೆಲಸ | ನಿವೃತ್ತ ಮ್ಯಾನೇಜರ್<br>ಕರ್ನಾಟಕ ಬ್ಯಾಂಕ್ | | |
| ವಾಸಸ್ಥಳ | ಉಡುಪಿ | | |

## ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

ನಾನು ಕರ್ನಾಟಕ ಬ್ಯಾಂಕ್ ಪ್ರಧಾನ ಕಛೇರಿ, ಮಂಗಳೂರಿನಲ್ಲಿ ವಿಜುಲೇನ್ಸ್ ಡಿಪಾರ್ಟ್ ಮೆಂಟ್ ನಲ್ಲಿ 16 ವರ್ಷಗಳು ಮ್ಯಾನೇಜರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಪ್ರಸ್ತುತ ಪ್ರಕರಣಕ್ಕೆ ಸಂಬಂಧಪಟ್ಟಂತೆ ಕರ್ನಾಟಕ ಬ್ಯಾಂಕ್ ವಿಜುಲೇನ್ಸ್ ಡಿಪಾರ್ಟ್ ಮೆಂಟ್ ಆದೇಶದ ಮೇರೆಗೆ ನಾನು ಹಾಗೂ ಚಾಸಾ-27 ರವರು 10.03.2011 ರಿಂದ 10.02.2011 ರವರೆಗೆ ಹುಣಸೂರಿನ ಕರ್ನಾಟಕ ಬ್ಯಾಂಕ್ ನಲ್ಲಿ ಆಗ ಮ್ಯಾನೇಜರ್ ಆಗಿದ್ದ ಆರೋಪಿ ಅವರು ಕೆಲವು ಹಣ ಹಾಗೂ ಪದವಿಯನ್ನು ದುರುಪಯೋಗ ಮಾಡಿರುತ್ತಾರೆ ಎಂದು ಪರಿಶೀಲನೆ ಮಾಡಲು ನಾವು ಹುಣಸೂರಿಗೆ ಬಂದಿರುತ್ತೇವೆ.

2. ಸದರಿ ಬ್ಯಾಂಕಿನಲ್ಲಿ ರಾಜಮ್ಮ ಎಂಬುವವರ ಉಳಿತಾಯ ಖಾತೆ ಇದ್ದು, ಅವರಿಗೆ ಕಬ್ಬು ಬೆಳೆಯುವ ಸಲುವಾಗಿ ಸುಮಾರು ರೂ.58,000/- ಹಣ ಬೆಳೆ ಸಾಲ ನೀಡಲಾಗಿತ್ತು. ಸದರಿಯವರು ಬೆಳೆದ ಕಬ್ಬನ್ನು ನಂಜನಗೂಡಿನ ಸಕ್ಕರೆ ಕಾರ್ಖಾನೆಗೆ ಸರಬರಾಜು ಮಾಡಿದ್ದರು. ಕರ್ನಾಟಕ ಬ್ಯಾಂಕಿನ ಮನವಿ ಮೇರೆಗೆ ಸದರಿ ಸಕ್ಕರೆ ಕಾರ್ಖಾನೆಯಿಂದ ಸುಮಾರು ರೂ.58,000/- ಚೆಕ್ ನೇರವಾಗಿ ಕರ್ನಾಟಕ ಬ್ಯಾಂಕ್, ಹುಣಸೂರು ಶಾಖೆಗೆ ಬಂದಿತ್ತು.

3. ಆರೋಪಿಯು ರಾಜಮ್ಮ ಅವರಿಂದ ಖಾಲಿ ಕ್ರೆಡಿಟ್ ಚಲನ್ ಹಾಗೂ ಚೆಕ್ ಗೆ ಸಹಿ ಪಡೆದು ಒಂದು ವಾರ ಬಿಟ್ಟು ಬನ್ನಿ ಎಂದು ತಿಳಿಸಿದ್ದರು. ಆದರೆ ಸದರಿ ಹಣವನ್ನು ಸದರಿ ರಾಜಮ್ಮ ಅವರ ಖಾತೆಗೆ ಜಮಾ ಮಾಡದೆ ಬೇರೆ ರಾಜಮ್ಮ ಅವರ ಹೆಸರಿಗೆ ಅವರು ಕಬ್ಬು ಬೆಳೆಗಾರರಲ್ಲ

ಟೋಬ್ಯಾಕೋ ಬೆಳೆಗಾರರಾಗಿದ್ದರು ಅವರ ಖಾತೆಗೆ ಜಮಾ ಮಾಡಿದ್ದರು. ಹಳೆಯದಾಗಿ ತೆಗೆದುಕೊಂಡಿದ್ದ ಖಾಲಿ ಚೆಕ್ ಹಾಗೂ ಚಲನ್ ಉಪಯೋಗಿಸಿ ಸದರಿ ಟೊಬ್ಯಾಕೋ ಬೆಳೆಗಾರರಾದ ರಾಜಮ್ಮ ಅವರ ಖಾತೆಯಿಂದ ತೆಗೆದು ತನ್ನ ಸ್ವಂತಕ್ಕೆ ಆರೋಪಿ ಉಪಯೋಗಿಸಿ

4. ವರದರಾಜು ಎಂಬುವವರು ಬ್ಯಾಂಕಿನಿಂದ ಸುಮಾರು 11,25,000/- ರೂ. ಬೇರೆ ಬೇರೆ ಸಾಲ ತೆಗೆದುಕೊಂಡಿದ್ದು ಅದರ ಕಂತನ್ನು ಪಾವತಿಸುವ ಸಲುವಾಗಿ ಫೆಬ್ರವರಿ-2010 ರಂದು 3,00,000/- ರೂ. ಅನ್ನು ಆರೋಪಿ ಕೈಗೆ ನಗದಾಗಿ ಕೊಟ್ಟಿದ್ದು, ಅದನ್ನು ಆರೋಪಿ ಬೇರೆ ಬೇರೆ ಕಂತುಗಳಿಗೆ ಜಮಾ ಮಾಡುವಂತೆ ಹೇಳಿದ್ದರು. ಆದರೆ ಆರೋಪಿ ಅವುಗಳನ್ನು ಜಮಾ ಮಾದೆ 2010 ಮೇ 31 ರಂದು ಕರ್ನಾಟಕ ಬ್ಯಾಂಕ್, ಮೈಸೂರು ಕುವೆಂಪು ನಗರ ಶಾಖೆಯಿಂದ ರೂ.2,64,000/- ಹಣವನ್ನು ಆರೋಪಿ ವರದರಾಜು ಅವರ ಬೇರೆ ಬೇರೆ ಖಾತೆಗೆ ಜಮಾ ಮಾಡಿರುತ್ತಾರೆ. ಉಳಿದ 36,000/- ರೂ. ಹಣವನ್ನು ಆರೋಪಿ ದುರುಪಯೋಗಪಡಿಸಿಕೊಂಡಿರುತ್ತಾರೆ.

5. ಕೂರ್ಗ್ ಕೆಫೆ ಮಾಲೀಕರಾದ ಕಾವೇರಪ್ಪ ಅವರು ಸದರಿ ಕರ್ನಾಟಕ ಬ್ಯಾಂಕಿನಲ್ಲಿ ಖಾತೆ ಹೊಂದಿದ್ದು ಸದರಿ ಬ್ಯಾಂಕಿನ ಕೆವೈಎಸ್ಸಿ ನಿಯಮಗಳನ್ನು ಗಣನೆಗೆ ತೆಗೆದುಕೊಳ್ಳದೆ ಚಾಲ್ತಿ ಖಾತೆ ಮತ್ತು ಉಳಿತಾಯ ಖಾತೆಗಳನ್ನು ಆರೋಪಿ ತೆರೆದಿದ್ದು, ಸದರಿ ಕಾವೇರಪ್ಪ ಅವರಿಗೆ ಮಾರುತಿ ಸುಜುಕಿ ಸ್ವಿಫ್ಟ್ ಕಾರನ್ನು ತೆಗೆದುಕೊಳ್ಳಲು ಬ್ಯಾಂಕಿನಿಂದ ಕೆಬಿಎಲ್ ಕಾರಿನ ಸ್ಕೀಮ್ ಅಡಿಯಲ್ಲಿ 6,00,000/- ಸಾಲ ಮಂಜೂರು ಮಾಡಿರುತ್ತಾರೆ. ಸದರಿ ಸಾಲದ ಹಣವನ್ನು ಕಾವೇರಪ್ಪ ಅವರ ಚಾಲ್ತಿ ಖಾತೆ ಗೆ ಜಮಾ ಮಾಡಿರುತ್ತಾರೆ. ನಂತರ 6,00,000/- ಚಿಲ್ಲರೆ ಹಣವನ್ನು ಡಿ.ಡಿ. ಮೂಲಕ ತೆಗೆದು ಅದನ್ನು ಬೆಂಗಳೂರಿನ ಒಂದು ಪ್ರಣಬ್ ಮೋಟಾರ್ಸ್ ಅವರ ಹೆಸರಿನಲ್ಲಿ ಡಿ.ಡಿ. ತೆಗೆದು ಸದರಿ ಡಿ.ಡಿ.ಯನ್ನು ಕಾವೇರಪ್ಪ ಅವರಿಗೆ ನೀಡಿರುತ್ತಾರೆ. ಕರ್ನಾಟಕ ಬ್ಯಾಂಕಿನ ಕಾರಿನ ಆರ್ ಸಿ, ಇನ್ ವಾಯ್ಸ್ ಹಾಗೂ ಡ್ಯೂಪ್ಲಿಕೇಟ್ ಕೀ ಬ್ಯಾಂಕಿಗೆ ತಲುಸಿಲ್ಲ, ಸದರಿ ಕಾವೇರಪ್ಪ ಅವರನ್ನು ವಿಚಾರಿಸಿದಾಗ ನಾನು ಕಾರ್ ಲೋನ್ ತೆಗೆದುಕೊಂಡಿಲ್ಲ. ಬ್ಯೂಸಿನೆಸ್ ಲೋನ್ ತೆಗೆದುಕೊಂಡಿದ್ದೇನೆ ಎಂದು ಹೇಳಿರುತ್ತಾರೆ.

6. ಬಿಜಾಪುರದ ಉಪ್ಪಾರ ಮತ್ತು ಇತರರು ಅವರು ಕರ್ನಾಟಕ ಬ್ಯಾಂಕ್ , ಹುಣಸೂರು ಬ್ರಾಂಚ್ ನಲ್ಲಿ ಉಳಿತಾಯ ಖಾತೆ ತೆಗೆದಿದ್ದು ಅವರನ್ನು ಬ್ಯಾಂಕಿಗೆ ಆರೋಪಿ ಪರಿಚಯ ಮಾಡಿಕೊಟ್ಟಿರುತ್ತಾರೆ. ಸದರಿ ಉಪ್ಪಾರ ಅವರು ಕರ್ನಾಟಕ ಬ್ಯಾಂಕಿನ ಬಿಜಾಪುರದ ಶಾಖೆಯಲ್ಲಿ ಬೇರೆ ಬೇರೆ ಸಾಲದ ಖಾತೆಗಳನ್ನು ಹೊಂದಿರುತ್ತಾರೆ. ಅವರ ಓವರ್ ಡ್ರಾಫ್ಟ್

ಅಕೌಂಟ್ ನಿಂದ 25 ಲಕ್ಷ ಹಣವನ್ನು ಕೋರ್ ಬ್ಯಾಂಕಿಂಗ್ ಮೂಲಕ ಹುಣಸೂರು ಬ್ರಾಂಚಿನ ಉಪ್ಪಾರ್ ಅವರ ಉಳಿತಾಯ ಖಾತೆಗೆ ಜಮಾ ಮಾಡಿರುತ್ತಾರೆ. ಸದರಿ 25 ಲಕ್ಷ ಹಣವನ್ನು ಸದರಿ ಉಪ್ಪಾರ್ ಅವರ ಲಿಖಿತ ಅನುಮತಿ ಇಲ್ಲದೆ ಖಾತೆಯಿಂದ ತೆಗೆದು ಆರೋಪಿ ಅವರ ಹೆಂಡತಿ ಅನುರಾಧ ಅವರು ಮಂಡ್ಯದಲ್ಲಿ ನಡೆಸುತ್ತಿರು ಬ್ಯುಸಿನೆಸ್ ಗೆ ಸಂಬಂಧಪಟ್ಟಂತೆ ಬ್ಯಾಂಕ್ ಆಫ್ ಬರೋಡಾ ಖಾತೆಗೆ ಜಮಾ ಮಾಡಿ, ಸದರಿ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ. ಈ ರೀತಿ ಆರೋಪಿ ಒಟ್ಟು ರೂ. 25,80,000/- ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

**ಪಾಟೀಸವಾಲುಃ ಆರೋಪಿ ಪರ ವಕೀಲರಾದ ಪಿ.ಎಲ್.ಕೆ ಅವರು ಗೈರುಹಾಜರಿದ್ದು ಪಿ.ಎಲ್.ಕೆ ಅವರ ಪರವಾಗಿ ಡಿ.ಹೆಚ್.ಕೆ ಅವರು ಕಾಲಾವಕಾಶ ಕೋರಿದ್ದು, ಯಾವುದೇ ಕಾರಣ ನೀಡದೆ ಇರುವುದರಿಂದ ಪಾಟೀಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಶಿರಿನ್ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.